ಓ.ಎಸ್.ನಂಃ 246/2024

**ಡಿಡಬ್ಲ್ಯೂ-1**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 12.06.2026 ರಂದು ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ವಾದಿ ಪರ ವಕೀಲರಿಂದಃ**

ನಿಪಿ4 ನ್ನು ಬಾಡಿಗೆದಾರರಿಗೆ ಕಳುಹಿಸಲಾಗಿದೆ. ಸದರಿ ದಾಖಲೆಯನ್ನು ವಾದಿಗೆ ಕಳುಹಿಸಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಿಡಿ5 ರಿಂದ ನಿಡಿ7 ನ್ನು ವಾದಿಗೆ ಕಳುಹಿಸಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿದ್ದೇನೆ. ಸಾಕ್ಷಿ ಮುಂದುವರೆದು ನಮ್ಮ ಕಛೇರಿಯಲ್ಲಿ ದಾಖಲೆ ಇದೆ ಎಂದು ನುಡಿಯುತ್ತಾರೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ನಿಡಿ4 ರಿಂದ ನಿಡಿ7 ನ್ನು ವಾದಿಯನ್ನು ಒಳಗೊಂಡಂತೆ ಯಾವುದೆ ಬಾಡಿಗೆದಾರರಿಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ನಿಡಿ8 ರ ಪುಟ ಸಂಖ್ಯೆ 02 ಮತ್ತು ಕಲಂ.3 ರ ಒಕ್ಕಣಿಕೆಗಳು ಸರಿ ಇರುತ್ತವೆ. ವಾದಿಯನ್ನು ದಾವಾ ಸ್ವತ್ತಿನಿಂದ ಖಾಲಿ ಮಾಡಿಸಲು ನಾವು ದಾವೆ ಹೂಡಿಲ್ಲ. ವಾದಿಯನ್ನು ದಾವಾ ಸ್ವತ್ತಿನಿಂದ ಖಾಲಿ ಮಾಡಿಸಲು ದಾವೆ ಹೂಡದೆ, ವಿನಾಕಾರಣ ವಾದಿಯ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ4 ರಿಂದ ನಿಡಿ8 ಈ ದಾವೆಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಈ ದಾವೆ ಚಾಲ್ತಿಯಲ್ಲಿರುವಾಗ ವಾದಿಯ ಮಳಿಗೆ ಬಳಿ ಹೋಗಿ ನಾನು ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತನ್ನು ಖಾಲಿ ಮಾಡಲು ನೋಟೀಸ್ ನೀಡಿದ್ದೇನೆ. ಸದರಿ ನೋಟೀಸ್  ನಂತೆ ವಾದಿ ದಾವಾ ಸ್ವತ್ತನ್ನು ಬಿಟ್ಟುಕೊಟ್ಟಿರುವುದಿಲ್ಲ. ಅದನ್ನು ಬಿಟ್ಟುಕೊಡದಂತೆ ನಾವು ದಾವೆ ಹೂಡಿಲ್ಲ, ಸಾಕ್ಷಿ ಮುಂದುವರೆದು ಅವರೇ ದಾವೆ ಹೂಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ವಾದಿಯೇ ಮುಂದುವರೆಯಬೇಕು ಎಂದು ಈ ದಾವೆ ಹೂಡಿದ್ದಾರೆ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ